**ದಿನಾಂಕ 03/01/2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ಎ ವಕೀಲರಿಂದ**

ನನ್ನ ತಂದೆಯ ಹೆಸರು ನಂಜೇಗೌಡ ಃ ಉಃ ಸಣ್ಣೇಗೌಡ. ನಮ್ಮ ಸ್ವಂತ ಊರು ಚಿಕ್ಕಕಾಡನೂರು ಗ್ರಾಮ ಎಂದರೆ ಸರಿ. ಚಿಕ್ಕಕಾಡನೂರು ಮತ್ತು ಗುಂಜೇವು ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ಗುಂಜೇವು ಗ್ರಾಮದಲ್ಲಿ ನನ್ನ ಸಂಬಂಧಿಕರಿಲ್ಲ, ಸ್ನೇಹಿತರು ಇದ್ದಾರೆ. ನಾನು ಹತ್ತನೇಯ ತರಗತಿಯವರೆಗೆ ಓದಿದ್ದೇನೆ. ನಾನು ಈಗ ತೋಟಗಾರಿಕೆ ಇಲಾಖೆಯಲ್ಲಿ ಲ್ಯಾಬ್ ನಲ್ಲಿ ಕೆಲಸ ಮಾಡುತ್ತೇನೆ. ನಾನು ಸದರಿ ಕೆಲಸ ಮಾಡಲು ಯಾವುದೆ ತರಬೇತಿ ಪಡೆದುಕೊಂಡಿಲ್ಲ. 1989 ರಿಂದ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಕೆಲಸ ಈಗಲೂ ಖಾಯಂ ಆಗಿಲ್ಲ ಎಂದರೆ ಸರಿ. ನಾನು 2016 ರಿಂದ ಸದರಿ ಕೆಲಸ ಮಾಡುತ್ತಿಲ್ಲ. ನನಗೆ ಪ್ರತಿ ದಿನಕ್ಕೆ 100 ರಿಂದ 250 ರೂ.ಗಳವರೆಗೆ ಸಂಬಳ ನೀಡುತ್ತಿದ್ದರು. ನಿ.ಡಿ 1ರ ದಾಖಲಾತಿಯನ್ನು ನಾನು ಕೆಲಸದಲ್ಲಿ ಇರುವಾಗ ಪಡೆದುಕೊಂಡಿದ್ದೇನು. ನನ್ನ ಕೆಲಸವನ್ನು ಖಾಯಂ ಗೊಳಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದೇನು, ಅದಕ್ಕಾಗಿ ನಿ.ಡಿ 1ರ ದಾಖಲಾತಿ ಪಡೆದುಕೊಂಡಿದ್ದೇನು.

ನನಗೆ 3 ಜನ ಮಕ್ಕಳು. ನನ್ನ ತಂದೆ ತಾಯಿ ಗ್ರಾಮದಲ್ಲಿ ವಾಸವಾಗಿದ್ದಾರೆ, ನಾನು ಹೊನಪುರ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ತಿಂಗಳಿಗೆ ರೂ. 3500/- ಬಾಡಿಗೆ ಪಾವತಿ ಮಾಡುತ್ತೇನೆ. ನನ್ನ ಮಕ್ಕಳು ದ್ವಿತೀಯ ಪದವಿ, ದ್ವಿತೀಯ ಪಿಯೂಸಿ ಮತ್ತು ಹತ್ತನೆಯ ತರಗತಿಗಳಲ್ಲಿ ಓದುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಕಷ್ಟು ಹಣ ಖರ್ಚಾಗುತ್ತದೆ ಎಂದರೆ ಸರಿ. ನಾನು ತೆಂಗಿನ ತೋಟ, ಜಮೀನು, ಟ್ರಾಕ್ಟರ ಮತ್ತು ಕಾರು ಸಹ ಹೊಂದಿದ್ದೇನೆ. 2004ರಲ್ಲಿ ವಾಹನ ಪರವಾಣಿಗೆ ಚಾಲನಾ ಪಡೆದುಕೊಂಡಿದ್ದೇನೆ. ಟ್ರಾಕ್ಟರನ್ನು 2011ರಲ್ಲಿ ಖರೀದಿಸಿದ್ದೇನೆ ಆದರೆ ಈವರೆಗೆ ನೊಂದಣಿ ಮಾಡಿಕೊಂಡಿಲ್ಲ. ಕಾರನ್ನು 5 ವರ್ಷಗಳ ಹಿಂದೆಯೇ ಮಾರಾಟ ಮಾಡಿದ್ದೇನೆ. ತೋಟ ನನ್ನ ತಂದೆಯ ಹೆಸರಿನಲ್ಲಿದೆ. ನಾನು ಯಾವುದೆ ತೋಟ, ಜಮೀನು ಮತ್ತು ಟ್ರಾಕ್ಟರ ಹೊಂದಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ 1 ಹಳದಿ ನೋಂದಣಿ ಬೋರ್ಡ ಇರುವ ಕಾರ ಇತ್ತು ಎಂದರೆ ಸರಿ.

ಚಿಕ್ಕಕಾಡನೂರು ಗ್ರಾಮದಿಂದ ಹೊನಪುರ 9 ಕಿ.ಮೀ ಇದೆ ಎಂದರೆ ಸರಿ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.